**ಪಿ.ಡಬ್ಲ್ಯೂ. 1**

ಇಂದು ದಿಃ **02.03.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1 ರಿಂದ 8 ನೇ ಪ್ರತಿವಾದಿ ಪರ ಶ್ರೀ ಸಿ ಎ ಕೆ ವಕೀಲರಿಂದ**

1. ಈ ದಾವೆಯನ್ನು ದಾಖಲಿಸಲು ಮಾಹಿತಿಯನ್ನು ನಾನೇ ಒದಗಿಸಿರುತ್ತೇನೆ. ಈ ದಾವೆಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ಈ ದಾವೆಯನ್ನು ದಾವಾ ಸ್ವತ್ತುಗಳಲ್ಲಿ ಪಾಲು ಕೇಳಿ ದಾಖಲಿಸಿರುತ್ತೇನೆ ಬೇರೆ ಯಾವುದೇ ಪರಿಹಾರ ಕೇಳಿಲ್ಲ. ನಾನು ಈ ದಾವೆಯನ್ನು 16-17 ಜನರ ವಿರುದ್ದ ದಾಖಲಿಸಿರುತ್ತೇನೆ. ನಾನು ಈ ದಾವೆ ದಾಖಲಿಸುವ ಮೊದಲು ಸಹ ದಾವೆಯನ್ನು ದಾಖಲಿಸಿದ್ದೆ ಎಂದರೆ ಸರಿಯಲ್ಲ. ನಾನು ಪಾಲು ಕೇಳಿ ದಾಖಲಿಸಿದ ದಾವೆ ಇದೇ ಮೊದಲಿನ ದಾವೆ. ಅಸಲು ದಾವಾ ನಂ.264/2012 ನ್ನು ನಾನು ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ದಾಖಲಿಸಿದ್ದೆ ಎಂದರೆ ಸರಿಯಲ್ಲ. ಆ ನಂತರ ಅಸಲು ದಾವಾ ನಂ.537/2015 ನ್ನು ನಾನು ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ದಾಖಲಿಸಿದ್ದೆ ಎಂದರೆ ಸರಿಯಲ್ಲ. ನಾನು ನನ್ನ ವಾದಪತ್ರದ ಪ್ಯಾರಾ ನಂ.10 ರಲ್ಲಿ ನಾನು ಈ ಮೊದಲು ಸಹ ದಾವೆಯನ್ನು ದಾಖಲಿಸಿದ್ದು ತಾಂತ್ರಿಕ ದೋಷಗಳಿಂದ ಸದರಿ ದಾವೆಯನ್ನು ಮುಂದುವರೆಸಿಲ್ಲ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ಅಸಲು ದಾವಾ ನಂ.264/2012 ರ ಧೃಡಿಕೃತ ನಕಲನ್ನು ತೋರಿಸಿದ್ದು ಸದರಿ ಧೃಡಿಕೃತ ನಕಲಿನಲ್ಲಿರುವ ಸಹಿ ಆತನದ್ದೆ ಎಂದು ಸೂಚಿಸಿದ್ದು ಸಾಕ್ಷಿ ಅದನ್ನು ಒಪ್ಪಿಕೊಂಡಿರುತ್ತಾರೆ. ಸದರಿ ವಾದಪತ್ರದ ಧೃಡಿಕೃತ ನಕಲನ್ನು **ನಿಡಿ.1** ಎಂದು ಗುರುತಿಸಲಾಯಿತು. ಸದರಿ ನಿಡಿ.1 ದಾವೆ ನಾವು ಮುಂದುವರೆಸದಿದ್ದ ಕಾರಣದಿಂದ ಮಜಾಗೊಂಡಿರುತ್ತದೆ ಎಂದರೆ ಸಾಕ್ಷಿ ಸದರಿ ದಾವೆಯನ್ನು ಯಾರು ಮಾಡಿದ್ದರು ಗೊತ್ತಿಲ್ಲ ಎನ್ನುತ್ತಾರೆ. ಸದರಿ ದಾವೆಯನ್ನು ನಾನೇ ಮಾಡಿದ್ದ ಎಂದು ನನಗೆ ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಅಸಲು ದಾವಾ ನಂ.537/2015 ನ್ನು ಸಹ ನಾನೇ ದಾಖಲಿಸಿದ್ದು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಎಲ್ಲ ಸಂಗತಿಗಳನ್ನು ಮುಚ್ಚಿಟ್ಟು ಸುಳ್ಳು ಮಾಹಿತಿ ನೀಡಿ ಸುಳ್ಳು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

2. ಈ ದಾವೆಯನ್ನು ಸರ್ವೇ ನಂ.55,53,779 ಹಾಗೂ ಮನೆಗೆ ಸಂಬಂದಿಸಿದಂತೆ ದಾಖಲಿಸಿರುತ್ತೇನೆ. ಹಜಾರೆ ಕುಟುಂಬದ ಮೂಲ ಪುರುಷ ಫಕ್ಕಿರಪ್ಪ ಹಜಾರೆ. ಸದರಿ ಫಕ್ಕಿರಪ್ಪ ಹಜಾರೇ ರವರ ಹೆಂಡತಿಯ?ಹೆಸರು ನನಗೆ ಗೊತ್ತಿಲ್ಲ. ಸದರಿ ಫಕ್ಕಿರಪ್ಪ ಹಜಾರೆ ರವರ ಹೆಂಡತಿಯ ಹೆಸರನ್ನು ವಂಶಾವಳಿಯಲ್ಲಿ ತೋರಿಸಿಲ್ಲ. ಸದರಿ ಫಕ್ಕಿರಪ್ಪ ಹಜಾರೆ

**ಪಿ.ಡಬ್ಲೂ. 1**

ರವರಿಗೆ ಹನುಮಂತಪ್ಪ ಮತ್ತು ಯಲ್ಲಪ್ಪ ಎಂಬ ಎರಡು ಜನ ಮಕ್ಕಳು. ಸದರಿ ಫಕ್ಕಿರಪ್ಪ ಹಜಾರೆ ರವರ 2 ನೇ ಮಗ ಯಲ್ಲಪ್ಪ ರವರ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. ಹಾಗೂ ಸದರಿ ಯಲ್ಲಪ್ಪ ರವರಿಗೆ ಎಷ್ಟು ಜನ ಮಕ್ಕಳು ಎಂದು ಸಹ ನನಗೆ ಗೊತ್ತಿಲ್ಲ. ಸದರಿ ಮೂಲ ಪುರುಷನ ಮೊದಲನೇ ಮಗ ಹನುಮಂತಪ್ಪನ ಹೆಂಡತಿಯ ಹೆಸರು ಸಾವಕ್ಕ. ಸದರಿ ಹನುಮಂತಪ್ಪ ಮತ್ತು ಸಾವಕ್ಕ ರವರಿಗೆ ಮೂರು ಜನ ಗಂಡು ಮಕ್ಕಳು ಹಾಗೂ ಐದು ಜನ ಹೆಣ್ಣು ಮಕ್ಕಳು ಅವರುಗಳೆಂದರೇ , 1. ಮಾರುತಿ , 2. ಗಿರೀಶ , 3. ಫಕ್ಕಿರಪ್ಪ 4. ನೀಲವ್ವ , 5. ಸುಧಾ , 6. ತುಳಸವ್ವ , 7. ಯಲ್ಲಕ್ಕ ಮತ್ತು 8. ಪಾರಕ್ಕ. ಸದರಿ 1 ನೇ ಮಗ ಮಾರುತಿ ರವರ ಹೆಂಡತಿಯ ಹೆಸರು ಸಾವಕ್ಕ. ಮಾರುತಿ ಹೆಂಡತಿ ಸಾವಕ್ಕ ರವರಿಗೆ ಯಾವುದೇ ಸಂತಾನ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಸಾವಕ್ಕ ರವರಿಗೆ ದ್ಯಾಮವ್ವ ಎಂದು ಸಹ ಕರೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ವಾದಪತ್ರದಲ್ಲಿ ಸಲ್ಲಿಸಿರುವ ವಂಶಾವಳಿಯನ್ನು ಸೃಷ್ಟಿಸಿಕೊಂಡು ನನ್ನ ಅನೂಕೂಲಕ್ಕೆ ತಕ್ಕಂತೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಂಶಾವಳಿಯಲ್ಲಿ ಮಾರುತಿ ಹಾಗೂ ಸಾವಕ್ಕ ರವರ ಮಗ ನಾನು ಎಂದು ತೋರಿಸಿರುವುದು ಸುಳ್ಳಿದೆ ಎಂದರೆ ಸರಿಯಲ್ಲ. ಸದರಿ ಹಜಾರೆ ಮನೆತನಕ್ಕೆ ನಾನು ಯಾವುದೇ ರೀತಿಯಿಂದ ಸಂಬಂದ ಇಲ್ಲ ಎಂದರೆ ಸರಿಯಲ್ಲ.

( ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಗಿದೆ .)

**(ತೆರೆದ ನ್ಯಾ..ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಅದೆ,

**( ಅಮೊಲ್ ಜಯಕುಮಾರ ಹಿರಿಕುಡೆ.)**
**4** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಧಾರವಾಡ.